ರಸ್ತೆಯ ಬದಿಯಲ್ಲಿನ ಜಮೀನನ್ನು ವಾಣಿಜ್ಯ ಪ್ರಯೋಜನಕಾರಿಯಾಗಿ ಮಾಡಲು ಖಾಸಗಿ ಅಭಿವೃದ್ದಿದಾರರಿಗೆ ಅನುಮತಿ ನೀಡಲು ಉದ್ದೇಶಿಸಲಾಗಿದೆ. ಯಶಸ್ವಿ ಟೆಂಡರುದಾರರಿಂದ ಸದರಿ ರಸ್ತೆಯ ಎರಡು ಬದಿಗಳಲ್ಲಿಯೂ ಸುಮಾರು 250 ಮೀ.ಗಳಷ್ಟು ಆಗಲದ ಜಮೀನನ್ನು ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ.

ಈ) ಪ್ರಸಕ್ತ ದರದಲ್ಲಿ ಹೊರ ವರ್ತುಲ ರಸ್ತೆಯ ನಿರ್ಮಾಣಕ್ಕೆ (ಕೈಗೆತ್ತಿಕೊಂಡಿರುವ ಮತ್ತು ಕೈಗೆತ್ತುಕೊಳ್ಳಬೇಕಾಗಿರುವ ರಸ್ತೆಯ ಕಾಮಗಾರಿಗಳು ಸೇರಿ) ಸುಮಾರು 270 ಕೋಟಿ ರೂ. ಗಳಾಗುವುದೆಂದು ಅಂದಾಜು ಮಾಡಲಾಗಿದೆ. ಈ ವೆಚ್ಚದಲ್ಲಿ ರಸ್ತೆಗಾಗಿ ನಿರ್ಮಿಸಬೇಕಾಗಿರುವ ಸೇತುವೆಗಳು, ಫ್ಲೈ ಓವರ್‌ಗಳು ಮುಂತಾದ ಕಟ್ಟಡಗಳ ವೆಚ್ಚವು ಸೇರಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ ಈ ಕೆಲಸವನ್ನು ಖಾಸಗಿ ಯವರಿಂದ ಮಾಡಿಸಲು ಸರ್ಕಾರವು ನಿಶ್ಚಯಿಸಿದೆ.

ನಗರದಲ್ಲಿ ಬ್ರಿಟೀಷ್ ಯುವತಿ ಮೇಲೆ ಅತ್ಯಾಚಾರ.

298 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಇತ್ತೀಚೆಗೆ ಬ್ರೀಟೀಷ್ ಯುವತಿಯ ಮೇಲೆ ಅತ್ಯಾಚಾರ ವೆಸಗಿದ ಪ್ರಕರಣದಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ,

ಆ) ಈ ಪ್ರಕರಣವಾಗಿ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಕಳೆದಿದ್ದು ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿಲ್ಲವೆಂಬ ವಿಚಾರ ನಿಜವೇ,

ಇ) ಇಂತಹ ಪ್ರಕರಣ ಮರುಕಳಿಸಿದಂತೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಇದುವರೆಗೂ ಯಾರನ್ನೂ ಬಂಧಿಸಿರುವುದಿಲ್ಲ.

ಆ) ಹೌದು.

ಇ) ಈ ಬಗ್ಗೆ ಕೈಗೊಂಡ ಕ್ರಮಗಳು ಕೆಳಕಂಡಂತಿವೆ.

1. ರಾತ್ರಿ ಹೊತ್ತು ಆಟೋ ಓಡಿಸುವವರು ಹತ್ತಿರದ ಪೋಲೀಸ್ ಠಾಣೆಯಲ್ಲಿ ತಮ್ಮ ಹೆಸರನ್ನು ಇತರೆ ವಿವರಗಳನ್ನು ದಾಖಲು ಮಾಡಿಸಿ, ವಿಶೇಷ ಪರವಾನಗಿಯನ್ನು ಪಡೆಯುವುದು.

2. ರಾತ್ರಿ ಹೊತ್ತಿನಲ್ಲಿ ವಿಶೇಷ ಪರವಾನಗಿ ಪಡೆಯದೇ ಆಟೋ ಓಡಿಸುವವರನ್ನು ತಡೆಗಟ್ಟಲು ವಿಶೇಷ ತಪಾಸಣೆ ಏರ್ಪಡಿಸಲಾಗಿದೆ.

3. ಸಮಾಜ ಘಾತುಕ ವ್ಯಕ್ತಿಗಳು ರಾತ್ರಿ ಹೊತ್ತಿನಲ್ಲಿ ಆಟೋ ಓಡಿಸುವ ನೆಪದಲ್ಲಿ

ಸಮಾಜವಿದ್ರೋಹಿ ಚಟುವಟಿಕೆಗಳಲ್ಲಿ ತೊಡಗುವುದನ್ನು ತಡೆಗಟ್ಟಲು ರಾತ್ರಿ ಹೊತ್ತಿನಲ್ಲಿ ವಿಶೇಷವಾಗಿ ವಾಹನಗಳನ್ನು ಚೆಕ್ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಪ್ರಕರಣದ ಮುಂದಿನ ತನಿಖೆಯನ್ನು ಸಿಓಡಿಗೆ ವಹಿಸಲಾಗಿದೆ.

ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ.

279 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೃಷ್ಣಾ ಭಾಗ್ಯ ನಿಗಮ ಎಂದಿನಿಂದ ಜಾರಿಗೆ ಬಂದಿದೆ?*

ಆ) *ಕೃಷ್ಣಾ ಭಾಗ್ಯ ಜಲ ನಿಗಮದ ಜಾಹಿರಾತಿಗಾಗಿ ಯಾವ್ಯಾವ ಪತ್ರಿಕೆಗಳಿಗೆ ಈವರೆಗೆ ಎಷ್ಟೆಷ್ಟು ಮೊತ್ತದ ಜಾಹಿರಾತು ಬಿಡುಗಡೆ ಮಾಡಲಾಗಿದೆ. ಜಾಹಿರಾತನ್ನು ಯಾವ ಯಾವ ಏಜೆನ್ಸಿಗಳ ಮೂಲಕ ಬಿಡುಗಡೆ ಮಾಡಲಾಗಿದೆ?*

ಇ) *ದೂರದರ್ಶನದ ಜಾಹಿರಾತಿಗಾಗಿ ಇದುವರೆಗೆ ಖರ್ಚು ಮಾಡಿರುವ ಹಣದ ವಿವರ ನೀಡುವುದು.*

ಶ್ರೀ ಹೆಚ್.ಡಿ. ದೇವೇಗೌಡ : (ಮುಖ್ಯ ಮಂತ್ರಿಗಳು)

ಅ) ಕೃಷ್ಣಾ ಭಾಗ್ಯ ಜಲ ನಿಗಮವು ದಿನಾಂಕ 18-8-94ರಿಂದ ಜಾರಿಗೆ ಬಂದಿದೆ.

ಆ) ಕೃಷ್ಣಾ ಭಾಗ್ಯ ಜಲ ನಿಗಮವು ಇದುವರೆಗೂ 2 ಜಾಹಿರಾತು ಏಜೆನ್ಸಿಗಳ ಮೂಲಕ 58.22 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಮಾರ್ಕೆಟಿಂಗ್ ಕನ್ಸಲಟೆಂಟ್ಸ ಅಂಡ್ ಏಜೆಂಟ್ಸ ಲಿ. ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಈ ಏಜೆನ್ಸಿಯ ಮುಖಾಂತರ 57 ಪತ್ರಿಕೆಗಳಿಗೆ 8.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತೊಂದು ಜಾಹಿರಾತು ಸಂಸ್ಥೆಯಾದ ಪ್ರೆಸ್ ಅಡ್ವರಟೈಸಿಂಗ್ ಅಂಡ್ ಮಾರ್ಕೆಟಿಂಗ್ ಪ್ರೈ. ಲಿ. ಮುಖಾಂತರ 7 ಪತ್ರಿಕೆಗಳಿಗೆ 19.72 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಪತ್ರಿಕೆಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಇ) ಕೃಷ್ಣಾ ಭಾಗ್ಯ ಜಲ ನಿಗಮವು ಜಾಹಿರಾತಿಗಾಗಿ ದೂರದರ್ಶನದವರಿಗೆ ೧೯.೭೦ ಲಕ್ಷ ರೂ.ಗಳನ್ನು ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆಂಟ್ಸ್ ಲಿ. ಮೂಲಕ ಖರ್ಚುಮಾಡಿದೆ.